# ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

## ಓ.ಎಸ್. 04/2019

ದಿನಾಂಕಃ 10.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಎನ್.ಎನ್. ವಕೀಲರಿಂದಃ

ನಿ.ಪಿ. 3 ಮತ್ತು 4 ರಲ್ಲಿ ಸಾಕ್ಷಿದಾರರು ಒಬ್ಬರೇ ಇರುತ್ತಾರೆ ಎನ್ನುವುದು ನಿಜ. ನಿ.ಪಿ. 3 ಮತ್ತು 4 ದಾಖಲೆಗಳನ್ನು ಈ ಛಾಪಾ ಕಾಗದಗಳು (E-Stamp paper) ಅಲ್ಲ ಎನ್ನುವುದು ನಿಜ. ನಿ.ಪಿ. 1 ರಲ್ಲಿ ನಾನು ಸಹ ಸಹಿ ಮಾಡಿದ್ದೇನೆ ಎನ್ನುವುದು ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ದಿಃ 15.07.2013 ರಂದು ನನ್ನ ಹೆಸರಿನಲ್ಲಿ ಶಿವಣ್ಣ ಎನ್ನುವವರು ಈ ಛಾಪಾ ಕಾಗದವನ್ನು ಖರೀದಿಸಿದ್ದಾರೆ ಎನ್ನುವುದು ಸುಳ್ಳು. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎನ್ನುವುದು ಸುಳ್ಳು. ನಿ.ಪಿ. 3 ಮತ್ತು 4 ರಲ್ಲಿರುವ ಸಾಕ್ಷಿದಾರರೇ ಸದರಿ ದಾಖಲೆಗೂ ಸಾಕ್ಷಿ ಎಂದು ಸಹಿ ಮಾಡಿದ್ದಾರೆ ಎನ್ನುವುದು ಸುಳ್ಳು. ನಿ.ಪಿ. 3 ಮತ್ತು 4 ರಲ್ಲಿರುವ ಸಾಕ್ಷಿದಾರರ ಸಹಿಗಳಿಗೂ ಮತ್ತು ಸದರಿ ದಾಖಲೆಯಲ್ಲಿರುವ ಸಾಕ್ಷಿದಾರರ ಸಹಿಗಳು ಒಂದೇ ಇರುತ್ತದೆ ಎನ್ನುವುದು ಸುಳ್ಳು.

ದಿಃ 07.12.2012 ರ ಕರಾರು ಪತ್ರದ ಮೂರು ವರ್ಷದ ಅವಧಿಯೊಳಗೆ ಖರೀದಿ ಪತ್ರ ಬರೆದುಕೊಡಬೇಕು ಎಂದು ಕೇಳಿ ಪ್ರತಿವಾದಿಯರಿಗೆ ನೋಟಿಸನ್ನು ಕೊಟ್ಟಿದ್ದೇವು. ನಾನು ಸದರಿ ಅವಧಿಯಲ್ಲಿ ಯಾವುದೇ ಪತ್ರ ವ್ಯವಹಾರಗಳನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ ನಿ.ಪಿ. 4 ರಲ್ಲಿ ನಾವು ಮತ್ತೆ ಮೂರು ವರ್ಷ ಅವಧಿಯನ್ನು ಬರೆದುಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ಆದರೆ, ಪ್ರತಿವಾದಿಯರೇ ಮೂರು ವರ್ಷದ ಅವಧಿಯನ್ನು ಕೇಳಿ ಬರೆದುಕೊಟ್ಟಿದ್ದರು. ಸಾಕ್ಷಿದಾರರಾದ ಪಿ.ಡಬ್ಲ್ಯೂ2 ಮತ್ತು 3 ಸಹ ಸದರಿ ಪತ್ರಕ್ಕೆ ನೋಂದಣಿ ಕಛೇರಿಯಲ್ಲಿ ಸಾಕ್ಷಿ ಎಂದು ಸಹಿ ಮಾಡಿರುತ್ತಾರೆ. ನಿ.ಪಿ. 4 ಪತ್ರಕ್ಕೆ ನಟರಾಜು ಮತ್ತು ಮಹದೇವ ಎನ್ನುವವರು ಸಹಿ ಮಾಡಿರುತ್ತಾರೆ . ನಿ.ಪಿ. 4(ಜಿ) ಸಹಿಯ ಶ್ರೀನಿವಾಸ ಯಾರು ಎಂದು ನನಗೆ ಗೊತ್ತಿಲ್ಲ. ನಿ.ಪಿ. 4 ದಾಖಲೆಯನ್ನು ನಾವು ಮೋಸದಿಂದ ಪ್ರತಿವಾದಿಯರಿಂದ ಬರೆಸಿಕೊಂಡಿದ್ದೇವೆ ಎನ್ನುವುದು ಸುಳ್ಳು. ನಿ.ಪಿ. 4(ಜಿ) ಸಹಿ ಶ್ರೀನಿವಾಸ ಎನ್ನುವವರ ಸಹಿ ಅಲ್ಲ ಎನ್ನುವುದು ನಿಜ.

ವಾದಿಯ ಹತ್ತಿರ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಹಣ ಇತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬದ ಎಲ್ಲಾ ಹಣಕಾಸಿನ ವ್ಯವಹಾರವನ್ನು ನಾನೇ ಮಾಡುತ್ತೇನೆ ಎನ್ನುವುದು ಸರಿಯಲ್ಲ. ನಾನು ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಿ.ಪಿ. 4 ದಾಖಲೆಯನ್ನು ಬರೆಸಿಕೊಡುವ ಸಮಯದಲ್ಲಿ ನಮ್ಮ ಹತ್ತಿರ ಯಾವುದೇ ಹಣ ಇರಲಿಲ್ಲ ಎನ್ನುವುದು ಮತ್ತು ಪ್ರತಿವಾದಿಯರಿಗೆ ನಾವು ರೂ. 2 ಲಕ್ಷ ಹಣವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ದಿಃ 15.07.2013 ರಂದು ಪ್ರತಿವಾದಿಯರು ನಮ್ಮಿಂದ ರೂ. 2 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಸದರಿ ದಿನಾಂಕದಂದು ಬರೆದ ದಾಖಲೆಯಲ್ಲಿ ನಿ.ಪಿ. 3 ದಾಖಲೆಯ ನೋಂದಣಿ ಸಂಖ್ಯೆಯನ್ನು ಬರೆದಿರುತ್ತಾರೆ ಎನ್ನುವುದು ಸುಳ್ಳು.

ನಾವು ಪ್ರತಿವಾದಿಯರಿಗೆ ಕೊಟ್ಟಿದ್ದ ನೋಟಿಸು ಜಾರಿಯಾಗಿರುತ್ತದೆ. ನಿ.ಪಿ. 10 ರಿಂದ 13 ಅಂಚೆ ಪರತ್ ಪಾವತಿಗಳಲ್ಲಿ ಪ್ರತಿವಾದಿಯರು ಯಾರು ಸಹಿ ಮಾಡಿಲ್ಲ ಎನ್ನುವುದು ಸರಿಯಲ್ಲ. ನಿ.ಪಿ. 5 ನೋಟಿಸನ್ನು ನಾನು ಪ್ರತಿವಾದಿಯರಿಗೆ ಕಳುಹಿಸಿಲ್ಲ ಎನ್ನುವುದು ಸರಿಯಲ್ಲ. ಪ್ರತಿವಾದಿಯರ ವಿರುದ್ಧ ದಾವೆಯನ್ನು ಹೂಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ನೋಟಿಸಿಗೆ ಪ್ರತಿವಾದಿಯರಿಗೆ ಉತ್ತರವನ್ನು ಕೊಟ್ಟಿಲ್ಲ. ನಿ.ಪಿ. 5 ರಲ್ಲಿ ವಾದಿ ಸಹಿ ಮಾಡಿರುತ್ತಾರೆ. ನಿ.ಪಿ. 14 ಪ್ರತ್ಯುತ್ತರ ದಲ್ಲಿ ಪ್ರತಿವಾದಿಯರು ಸಹಿ ಮಾಡಿಲ್ಲ ಎನ್ನುವುದು ನಿಜ.

ದಾವಾ ಆಸ್ತಿಗಳ ಮಾರುಕಟ್ಟೆಯ ಬೆಲೆ ರೂ. 20 ರಿಂದ 25 ಲಕ್ಷ ಬೆಲೆ ಬಾಳುತ್ತದೆ ಎನ್ನುವುದು ಸುಳ್ಳು. ಪ್ರತಿವಾದಿಯರು ಜಮೀನನ್ನು ಮಾರಾಟ ಮಾಡಲು ಒಪ್ಪದೇ ಇದ್ದರೂ ಅಕ್ರಮ ಪಾಯಿದೆಗೋಸ್ಕರ ನಿ.ಪಿ. 3 ಮತ್ತು 4 ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿ ಸುಳ್ಳು ದಾವೆ ಹೂಡಿದ್ದೇವೆ ಎನ್ನುವುದು ಸರಿಯಲ್ಲ. ಕರಾರು ಪತ್ರದಂತೆ ನಾವು ಪ್ರತಿವಾದಿಯರಿಗೆ ಇನ್ನೂ ರೂ 8,48,750/- ಬಾಕಿ ಇದ್ದೇವೆ. ಸದರಿ ಹಣದ ಪಾವತಿಗೆ ಪ್ರತಿವಾದಿಯರಿಗೆ ನೋಟಿಸ್‌ನೊಂದಿಗೆ ಡಿ.ಡಿ ಅಥವಾ ಚೆಕ್ಕು ಮೂಲಕ ಕಳುಹಿಸಿರಲಿಲ್ಲ. ಸದರಿ ಮೊತ್ತದ ಹಣ ನಮ್ಮ ಹತ್ತಿರ ಇತ್ತು ಎಂದು ತೋರಿಸಲು ನ್ಯಾಯಾಲಯ ಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ, ನಮ್ಮ ಹತ್ತಿರ ಹಣ ಇತ್ತು. ಸದರಿ ಹಣವನ್ನು ನ್ಯಾಯಾಲಯ ದಲ್ಲಿ ನಾವು ಜಮಾ ಮಾಡಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಯರಿಗೆ ದಾವಾ ಆಸ್ತಿ ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳು ಅವರ ಜೀವನ

ಸಾಗಿಸಲು ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಅತಿ ಹೆಚ್ಚು ಬೆಲೆ ಬಾಳುವಂತಹ ಜಮೀನುಗಳನ್ನು ನಾವು ಪ್ರತಿವಾದಿಯರಿಗೆ ಮೋಸ ಮಾಡಲು ಕಡಿಮೆ ಮೊತ್ತದಲ್ಲಿ ಖರೀದಿಸಲು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ. ಜಮೀನನ್ನು ಕೊಂಡುಕೊಳ್ಳುವಷ್ಟು ಆರ್ಥಿಕ ಸಾಮರ್ಥ್ಯ ನಮಗೆ ಇಲ್ಲ ಎನ್ನುವುದು ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿ ಜಮೀನನ್ನು ನಮಗೆ ಮಾರಾಟ ಮಾಡಲು ಒಪ್ಪಿಕೊಂಡಿರಲಿಲ್ಲ ಎನ್ನುವುದು ಮತ್ತು ನಿ.ಪಿ. 3 ಮತ್ತು 4 ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಹೂಡಿದ್ದೇವೆ ಎನ್ನುವುದು ಮತ್ತು ಯಾವುದೇ ಪರಿಹಾರವನ್ನು ಪಡೆಯಲು ವಾದಿ ಅರ್ಹಳಿಲ್ಲ ಎನ್ನುವುದು ಸರಿಯಲ್ಲ. ಯಾವುದೇ ದಾವಾ ಖರ್ಚನ್ನು ಪಡೆಯಲು ಅರ್ಹರಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.